ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ.

ಸಿ.ಸಿ.ಃ 106/2016

ಪಿ. ಡಬ್ಲ್ಯು: 15
ಸಿ. ಡಬ್ಲ್ಯು: 19

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಅಜರ್ ಉದ್ದೀನ್ |
| ತಂದೆ/ಪತಿಯ ಹೆಸರು | ಃ | ಇಲಿಯಾಸ್ ಉದ್ದೀನ್ |
| ವಯಸ್ಸು | ಃ | 40 ವರ್ಷ |
| ವೃತ್ತಿ | ಃ | ಆರಕ್ಷಕ ನಿರೀಕ್ಷಕರು, ಚೆಸ್ಕಾಂ ಜಾಗೃತ ದಳ, ಚಾಮರಾಜನಗರ |
| ವಾಸ | ಃ | ಚಾಮರಾಜನಗರ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 21.10.2023

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ನಾನು ದಿಃ24.08.2015 ರಿಂದ ದಿಃ 19.07.2017 ವರೆಗೆ ಅರಕೆರೆ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ನಾನು ದಿಃ 10.01.2016 ರಂದು ಚಾಸಾ.17 ರವರಿಂದ ಕಡತವನ್ನು ಪಡೆದು ಪ ರಿಶೀಲಿಸಿ ತನಿಖೆಯನ್ನು ಮುಂದುವರೆಸಿದ್ದೇನೆ. ಅದೇ ದಿನ ಚಾಸಾ.18 ರವರು ಈ ಪ್ರಕರಣ ಪತ್ತೆಯಾಗಿರುವ ಬಗ್ಗೆ ದಾಖಲಾತಿಗಳನ್ನು ಮುಂದಿನ ತನಿಖೆಗಾಗಿ ನೀಡಿದ್ದು ಅದನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಈ ಪ್ರಕರಣದಲ್ಲಿ ಕಳವುವಾಗಿದ್ದ ಗ್ಯಾಸ್ ಸಿಲಿಂಡರ್ ಅನ್ನು ಮಾಲು ಪಟ್ಟಿ 4/2016 ರಂತೆ ನೊಂದಾಯಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ನ್ಯಾಯಾಲಯದ ಅನುಮತಿಪಡೆದು ಸೂಕ್ತ ಮುಚ್ಚಳಿಕೆ ಬಾಂಡ್ ಪಡೆದು ಪಿರ್ಯಾದಿ ವಶಕ್ಕೆ ಗ್ಯಾಸ್ ಸಿಲಿಂಡರ್ ನೀಡಿರುತ್ತೇನೆ. ಪ್ರಕರಣದಲ್ಲಿನ ತನಿಖೆ ಪೂರೈಸಿದ್ದರಿಂದ ಆರೋಪಿತನ ವಿರುದ್ದ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ.3 Indemnity bond ಮತ್ತು ಅದರಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.3-ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಪಿರ್ಯಾದಿ ವಶಕ್ಕೆ ತಾನು ನೀಡಿದ್ದ ಗ್ಯಾಸ್ ಸಿಲಿಂಡರ್ ಅನ್ನು ನಿಪಿ.4 ಮತ್ತು 5 ಭಾವಚಿತ್ರದಲ್ಲಿ ನೋಡಿ ಗುರುತಿಸಿರುತ್ತಾರೆ.

**<u>ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ</u>**

ನಾನು ಚಾಸಾ.17 ರವರಿಂದ ಕಡತವನ್ನು ಪಡೆದಾಗ ಅದು ಪತ್ತೆಯಾಗದ ಪ್ರಕರಣವಾಗಿತ್ತು. ನಾನು ಪ್ರಕರಣದಲ್ಲಿನ ಕಡತ ಪರಿಶೀಲನೆ ಮಾಡಿದಾಗ ನನಗೆ ಅಪರಾಧಿ ಯಾವುದೇ ತಪ್ಪನ್ನು ಮಾಡಿಲ್ಲವೆಂದು ಕಂಡುಬಂದರೂ ಕೂಡ ಆತನ ವಿರುದ್ದವಾಗಿ ಉದ್ದೇಶಪೂರ್ವಕವಾಗಿ ಸುಳ್ಳು ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸುಳ್ಳು. ಚಾಸಾ.18 ರವರಿಂದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕಡತವನ್ನು ಪಡೆದ ನಂತರ ಆರೋಪಿಯನ್ನು ನನ್ನ ವಶಕ್ಕೆ ಪಡೆದು ನಾನು ವಿಚಾರಣೆ ಮಾಡಿಲ್ಲ. ನನ್ನ ತನಿಖಾ ಕಾಲದಲ್ಲಿ ಆರೋಪಿ ಎಲ್ಲಿದ್ದಾನೆ ಎನ್ನುವ ಬಗ್ಗೆ ವಿಚಾರಣೆ ಮಾಡಿದ್ದೇನು. ನಮ್ಮ ಹಿರಿಯ ಅಧಿಕಾರಿಗಳ ನಿರ್ದೇಶನದ ಮೇರೆಗೆ ಆರೋಪಿತನನ್ನು ಈ ಪ್ರಕರಣದಲ್ಲಿ ಸಿಲುಕಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ದವಾಗಿ ಯಾವುದೇ ಸೂಕ್ತ ತನಿಖೆ ಮಾಡದೇ ಆತನಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.